ಸೆಲೆಬ್ರಿಟಿ

■ ಹನಿ

# ಇವಾಂಕಾ ಭೇಟಿ: ಲಾಭ ಯಾರಿಗೆ?

ಇವಾಂಕಾ ಮೇರಿ ಟ್ರಂಪ್ ಭಾರತಕ್ಕೆ ಭೇಟಿ ನೀಡಿ ಅಮೆರಿಕಕ್ಕೆ ಮರಳಿಯೂ ಆಗಿದೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಮೊದಲ ಮಡದಿಯ ಮಗಳು ಇವಾಂಕಾ. ಅಮೆರಿಕದ ಅಧ್ಯಕ್ಷರ ಅಧಿಕೃತ ಸಲಹೆಗಾರ್ತಿಯೂ ಹೌದು. ಹಾಗಾಗಿ ಅವರು ಭಾರತದಲ್ಲಿ ಸರ್ಕಾರದ ಅತಿಥಿ. ಖುದ್ದು ಭಾರತದ ಪ್ರಧಾನಿಯವರೇ ಇವಾಂಕಾ ಅವರ ಗೌರವಾರ್ಥ ಹೈದರಾಬಾದ್‌ನಲ್ಲಿ ಔತಣಕೂಟ ಏರ್ಪಡಿಸಿದ್ದರು. ಸಾಮಾನ್ಯವಾಗಿ ಒಂದು ದೇಶದ ಮುಖ್ಯಮಂತ್ರಿಯೋ, ಪ್ರಧಾನಿಯೋ ಅಥವಾ ಅಧ್ಯಕ್ಷರೋ ಬಂದರೆ ಭಾರತದ ಪ್ರಧಾನಿಯವರು ಔತಣಕೂಟ ನೀಡುವುದು ವಾಡಿಕೆ. ಆದರೆ ಈ ಸಲದ ವಿಶೇಷವೆಂದರೆ ಅಧ್ಯಕ್ಷರ ಮಗಳಿಗೂ ನಮ್ಮ ಪ್ರಧಾನಿಯವರು ಅಧಿಕೃತ ಔತಣಕೂಟ ಏರ್ಪಡಿಸಿದ್ದರು! ಇವಾಂಕಾ ಅಮೆರಿಕದ ಆಡಳಿತದಲ್ಲಿ ಎಷ್ಟೊಂದು ಪ್ರಭಾವಶಾಲಿ ಎನ್ನುವುದನ್ನು ಈ ಔತಣಕೂಟ ಎತ್ತಿ ತೋರಿಸಿದೆ.

ಹೈದರಾಬಾದ್‌ನಲ್ಲಿ ಇವಾಂಕಾ ಭಾಗವಹಿಸಿದ್ದು 8ನೇ ಜಾಗತಿಕ ಉದ್ಯಮಿಗಳ ಶೃಂಗಸಭೆಯಲ್ಲಿ. ಅಮೆರಿಕದ ಉದ್ಯಮಿಗಳ ನಿಯೋಗದ ನೇತೃತ್ವವನ್ನು ಆಕೆಯೇ ವಹಿಸಿದ್ದರು. ಆಕೆ ಬರುವುದಕ್ಕೆ ವಾರ ಮುನ್ನವೇ ಹೈದರಾಬಾದ್ ನಗರದುದ್ದಕ್ಕೂ ರಸ್ತೆಗಳ ಡಾಂಬರೀಕರಣ ನಡೆದವು. ಕೊಳೆ, ಕಸಗಳು ಕಣ್ಮರೆಯಾದವು. ನಗರದಲ್ಲಿ ಅಲ್ಲಲ್ಲಿ ಭಿಕ್ಷೆ ಬೇಡುತ್ತಿದ್ದ ಸಾವಿರಕ್ಕೂ ಹೆಚ್ಚು ಭಿಕ್ಷುಕರನ್ನು ಹೊರವಲಯಕ್ಕೆ ಎತ್ತಂಗಡಿ ಮಾಡಲಾಯಿತು. ಈ ಎಲ್ಲ ಕ್ರಮಗಳ ಹಿಂದೆ, ಭಾರತದ ಉದ್ಯಮಗಳಲ್ಲಿ ಅಮೆರಿಕದ ಕಂಪೆನಿಗಳು ಬಂಡವಾಳ ಹೂಡಿಕೆಗೆ ಹೆಚ್ಚಾಗಿ ಮುಂದೆ ಬರಲಿ ಎನ್ನುವುದು ಸರ್ಕಾರದ ಆಶಯವಾಗಿತ್ತು. ಶೃಂಗಸಭೆಯಲ್ಲಿ ಮಾತನಾಡಿದ ಇವಾಂಕಾ, 'ಮಹಿಳಾ ಉದ್ಯಮಿಗಳು ಮುಂದೆ ಬರಬೇಕು. ಮಹಿಳೆಯರ ಸಬಲೀಕರಣ ಆಗಬೇಕು' ಎಂದೆಲ್ಲ ಕರೆ ನೀಡಿದರು.

ಇತ್ತ ಇವಾಂಕಾರ ಭಾಷಣ ಪ್ರಸಾರವಾಗುತ್ತಿದ್ದಂತೆಯೇ ಅತ್ತ ಜಾಗತಿಕ ಮಟ್ಟದಲ್ಲಿ ಟೀಕೆಯೂ ಕೇಳಿಬಂತು. ಇವಾಂಕಾ ತನ್ನ ಕುಟುಂಬದ ನಾಲ್ಕನೇ ತಲೆಮಾರಿನ ಉದ್ಯಮಿ. ಟ್ರಂಪ್ ಕುಟುಂಬದ ಒಡೆತನದಲ್ಲಿರುವ ಬಟ್ಟೆ ಬರೆ ಮತ್ತು ಚಪ್ಪಲಿಗಳ ಬ್ರ್ಯಾಂಡ್ ಜಗತ್ತಿನಾದ್ಯಂತ ಹೆಸರುವಾಸಿ. ಚೀನಾ ಮತ್ತು ಇಂಡೋನೇಷ್ಯಾದ ಬೃಹತ್ ಗಾರ್ಮೆಂಟ್ ಫ್ಯಾಕ್ಟರಿಗಳಲ್ಲಿ ಈ ಬಟ್ಟೆಗಳು ತಯಾರಾಗುತ್ತವೆ. 'ತಮ್ಮ ಬಟ್ಟೆಗಳು ತಯಾರಾಗುವ ಫ್ಯಾಕ್ಟರಿಗಳಲ್ಲಿ ಮಹಿಳಾ ಕಾರ್ಮಿಕರು ದಿನಕ್ಕೆ 18 ಗಂಟೆ ದುಡಿಯುತ್ತಾರೆ. ಮ್ಯಾನೇಜರ್‌ಗಳ ಬೈಗುಳಗಳ ದಬ್ಬಾಳಿಕೆಯೂ ನಡೆಯುತ್ತದೆ. ಈ ಬಗ್ಗೆ ಟ್ರಂಪ್ ಆಗಲೀ ಇವಾಂಕಾ ಆಗಲೀ ಬಾಯಿ ಬಿಚ್ಚುವುದಿಲ್ಲ. ಭಾರತದಲ್ಲಿ ಮಹಿಳಾ ಸಬಲೀಕರಣದ ಬಗ್ಗೆ ಇವಾಂಕಾ ಭಾಷಣ ಮಾತ್ರ ಚೆನ್ನಾಗಿದೆ' ಎನ್ನುವುದು ಕೇಳಿಬಂದ ಮೊದಲ ಟೀಕೆ.



ಹೈದರಾಬಾದ್‌ನಲ್ಲಿ ಚಾರ್‌ಮಿನಾರ್ ಬಳಿ ತೆರಳಿ ಕರಕುಶಲ ವಸ್ತುಗಳನ್ನು ಖರೀದಿಸಿದ ಇವಾಂಕಾ, ಭಾರತದ ಮಹಿಳೆಯರ ಕರಕುಶಲ ಕಲೆಯ ಸಾಮರ್ಥ್ಯದ ಬಗ್ಗೆಯೂ ಮೆಚ್ಚುಗೆಯ ಮಾತುಗಳನ್ನಾಡಿದರು. ಇದರ ಬಗ್ಗೆಯೂ ಟೀಕಾಕಾರರ ಕೊಂಕು ಕೇಳಿಬಂತು. 'ಭಾರತದ ಕರಕುಶಲ ವಸ್ತ್ರಗಳ ಬಗ್ಗೆ ನಿಜಕ್ಕೂ ಇವಾಂಕಾಗೆ ಮೆಚ್ಚುಗೆ ಇದ್ದಿದ್ದರೆ, ಇಲ್ಲಿನ ಸ್ಥಳೀಯ ಬ್ರ್ಯಾಂಡ್ ಬಟ್ಟೆಗಳನ್ನು ಹಾಕಿಕೊಳ್ಳಬೇಕಿತ್ತು. ಅದು ಬಿಟ್ಟು ಬ್ರಿಟನ್ನಿನ ಖ್ಯಾತ ಬ್ರ್ಯಾಂಡ್ ಎರ್ಡೆಮ್, ಟಾಮಿ ಹಿಲ್‌ಫಿಗರ್ ಬ್ರ್ಯಾಂಡ್‌ನ ಜೀನ್ಸ್ ಮತ್ತು ಅಮೆರಿಕದ ಡಿಸೈನರ್ ಟೋರಿ ಬರ್ಕ್ ಅವರ ವಿನ್ಯಾಸದ ಬಟ್ಟೆಗಳನ್ನು ಧರಿಸಿ ಓಡಾಡಿದ್ದು ಸರಿಯಲ್ಲ. ಕನಿಷ್ಠ ಪಕ್ಷ ಬಾಲಿವುಡ್‌ನ ಡಿಸೈನರ್ ನೀತಾ ಲುಲ್ಲಾ ಆಕೆಯ ಸ್ವಾಗತಕ್ಕೆ ನೀಡಿದ ಸೀರೆಯನ್ನಾದರೂ ಒಂದು ದಿನ ಉಡಬೇಕಿತ್ತು' ಎನ್ನುವುದು ಟೀಕಾಕಾರರ ಅಂಬೋಣ.

ಅಪ್ಪ ಅಧಿಕಾರಕ್ಕೆ ಬರುವ ಮುನ್ನ ಟಿವಿ ಷೋಗಳ ನಿರ್ಮಾಪಕಿ, ಫ್ಯಾಷನ್ ಡಿಸೈನರ್, ಲೇಖಕಿ, ಮಹಿಳಾ ಉದ್ಯಮಿ ಎಲ್ಲವೂ ಆಗಿದ್ದ ಇವಾಂಕಾ, ಈಗ ಅಮೆರಿಕದ ಅಧ್ಯಕ್ಷರ ಅಧಿಕೃತ ಸಲಹೆಕಾರ್ತಿ ಆಗಿರುವ ಹಿನ್ನೆಲೆಯಲ್ಲೇ ಈ ಸೂಕ್ಷ್ಮ ಟೀಕೆಗಳೆಲ್ಲ ಸಹಜವೇ. ಆದರೆ ಇಂತಹ ಟೀಕೆಗಳಿಗೆಲ್ಲ ತಲೆ ಕೆಡಿಸಿಕೊಳ್ಳುವ ಮಹಿಳೆಯಲ್ಲ ಆಕೆ. ಆಕೆಯ ಹತ್ತರ ಎಳವೆಯಲ್ಲೇ ತಂದೆ, ಆಕೆಯ ತಾಯಿಗೆ ಡೈವೋರ್ಸ್ ಕೊಟ್ಟು ಬೇರೆ ಮದುವೆಯಾದ. ಚಿಕ್ಕಂದಿನಿಂದಲೂ ಸ್ವತಂತ್ರ ಪ್ರವೃತ್ತಿಯನ್ನು ಬೆಳೆಸಿಕೊಂಡಾಕೆ, ತನಗೆ ಸರಿ ಎನ್ನಿಸಿದ್ದನ್ನು ಮುಲಾಜಿಲ್ಲದೆ ಮಾಡಿದಾಕೆ. ಜೇರ್ಡ್ ಕುಶ್ನರ್ ಜತೆ ಮೊದಲು ಆಕೆ ಗೆಳೆತನ ಬೆಳೆಸಿದ್ದು 2005ರಲ್ಲಿ. 2008ರಲ್ಲಿ ಆತನ ತಂದೆ ಈ ಸಂಬಂಧಕ್ಕೆ ಆಕ್ಷೇಪ ವ್ಯಕ್ತಪಡಿಸಿದಾಗ ಗೆಳೆತನ ಮುರಿದುಬಿದ್ದಿತ್ತು. ಆದರೆ 2009ರಲ್ಲಿ ಆಕೆ ಕುಶ್ನರ್‌ನನ್ನೇ ಮದುವೆಯಾದರು. ಈಗ 36 ಹರೆಯದ (ಬರ್ತ್‌ಡೇ 30/10/1981) ಮೂರು ಮಕ್ಕಳ ತಾಯಿ ಇವಾಂಕಾ ರಾಷ್ಟ್ರದ ಅಧ್ಯಕ್ಷನಾಗಿರುವ ತಂದೆಗೆ ಬಹುದೊಡ್ಡ ಬೆಂಬಲ. ಚುನಾವಣೆಯ ಸಂದರ್ಭದಲ್ಲಿ ಟ್ರಂಪ್‌ಗೆ ಮಗಳ ಉದಾರವಾದಿ ಧೋರಣೆಯಿಂದಲೇ ಹೆಚ್ಚು ಮತಗಳು ಬಂದಿವೆ ಎನ್ನುವುದು ವೀಕ್ಷಕರ ಅಭಿಮತವಾಗಿತ್ತು. ಬಾಲ್ಯದಿಂದ ಕ್ರಿಶ್ಚಿಯನ್ ಆಗಿದ್ದ ಇವಾಂಕಾ, 2009ರಲ್ಲಿ ಸಾಂಪ್ರದಾಯಕ ಯೆಹೂದಿ ಧರ್ಮಕ್ಕೆ ಮತಾಂತರ ಆದಾಗಲೂ ತಂದೆ ಮಗಳ ಬೆಂಬಲಕ್ಕೆ ಗಟ್ಟಿಯಾಗಿ ನಿಂತಿದ್ದು ಸುದ್ದಿಯಾಗಿತ್ತು. ಎಕನಾಮಿಕ್ಸ್ ಬಿಎ ಪದವೀಧರೆ ಆಗಿರುವ ಇವಾಂಕಾ, ತಂದೆಗೆ ಯಾವ ವಿಶೇಷ ಕ್ಷೇತ್ರದಲ್ಲಿ ಸಲಹೆ ಕೊಡುತ್ತಾರೋ ಗೊತ್ತಿಲ್ಲ; ಆದರೆ ಆಕೆ ಕೊಟ್ಟ ಸಲಹೆಗಳೆಲ್ಲವೂ ಸರ್ಕಾರದಲ್ಲಿ ಕಾರ್ಯಗತವಾಗುತ್ತವೆ ಎನ್ನುವ ನಂಬಿಕೆ ಜಗತ್ತಿನಾದ್ಯಂತ ಹರಡಿದೆ. ಅದಕ್ಕೆಂದೇ ಆಕೆ ಹೋದೆಡೆಯಲ್ಲೆಲ್ಲ ಕೆಂಪು ಹಾಸಿನ ಸ್ವಾಗತ ದೊರೆಯುತ್ತಿದೆ. ಸದ್ಯಕ್ಕೆ ಸಲಹೆಗಾರ್ತಿಯ ಕೆಲಸಕ್ಕೆ ಈಕೆ ಸಂಬಳ ಪಡೆಯುತ್ತಿಲ್ಲವಂತೆ. ಆದರೆ ಅಧಿಕಾರ ದುರುಪಯೋಗ ಪಡಿಸಿಕೊಂಡು ತನ್ನ ಉದ್ಯಮಕ್ಕೆ ಲಾಭ ಮಾಡುವ ಪ್ರಕರಣ ಕಂಡುಬಂದರೆ, ಅಮೆರಿಕದಲ್ಲಿ ಅಧಿಕಾರದಲ್ಲಿ ಉಳಿಯುವುದು ಕಷ್ಟ ಎನ್ನುವುದು ಈಕೆಗೂ ಗೊತ್ತಿದೆ. ಈಕೆಯ ಭೇಟಿಯಿಂದ ಭಾರತಕ್ಕೆ ಏನಾದರೂ ಲಾಭ ಆಗಬಹುದೆ.. ಕಾದು ನೋಡಬೇಕು. ■

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65